# ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

# VISVESVARAYA JALA NIGAM LIMITED

(A Government of Karnataka Enterprise)

ನಂ:ವಿಜನಿನಿ:ಕೇಂಕಃಸಿ1:235 ಎಎಸ್‌ಟಿ:2016–17/199 ದಿನಾಂಕ: 20.02.17

ಮುಖ್ಯ ಲೆಕ್ಕಾಧಿಕಾರಿಗಳು
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
ವಿ.ವಿ ಬಡಾವಣೆ
ಚಿತ್ರದುರ್ಗ

ಮಾನ್ಯರೆ,

**ವಿಷಯ: ಮುಖ್ಯ ಆಡಳಿತಾಧಿಕಾರಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಕೇಂದ್ರ ಕಛೇರಿ ಚಿತ್ರದುರ್ಗ ಹುದ್ದೆಯ ಪ್ರಭಾರವನ್ನು ಹೆಚ್ಚುವರಿಯಾಗಿ ವಹಿಸಿಕೊಳ್ಳುವ ಕುರಿತು.**

**ಉಲ್ಲೇಖ: 1 ಸರ್ಕಾರದ ಆದೇಶ ಸಂ. ಜಸಂಇ/208/ಸೇಎಸು 2016, ಬೆಂಗಳೂರು ದಿನಾಂಕ: 27.01.2017.**

**2. ಸರ್ಕಾರದ ತಿದ್ದುಪಡಿ ಆದೇಶ ಸಂ. ಜಸಂಇ/208/ಸೇಎಸು 2016, ಬೆಂಗಳೂರು ದಿನಾಂಕ: 15.02.2017.**

*********

ಸರ್ಕಾರವು ಉಲ್ಲೇಖ (1) & (2)ರ ಆದೇಶಗಳಲ್ಲಿ ಸರ್ಕಾರವು ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ ಹಾಗೂ ಪುನರ್ವಸತಿ ಮತ್ತು ಪುನರ್‌ನಿರ್ಮಾಣ) ಭದ್ರಾ ಮೇಲ್ದಂಡೆ ಯೋಜನೆ, ತುಂಗಾ ಮೇಲ್ದಂಡೆ ಯೋಜನೆ ಮತ್ತು ಎತ್ತಿನಹೊಳೆ ಯೋಜನೆ, ಚಿತ್ರದುರ್ಗ ಕಛೇರಿಯ ಹುದ್ದೆ ಮತ್ತು ಸಿಬ್ಬಂದಿಯನ್ನು ವಿಶ್ವೇಶ್ವರಯ್ಯ ಜಲ ನಿಗಮದ ಕೇಂದ್ರ ಕಛೇರಿಯಲ್ಲಿ ಆಡಳಿತ ಮತ್ತು ಭೂಸ್ವಾಧೀನ ವಿಷಯಗಳನ್ನು ನಿರ್ವಹಿಸಲು ಮುಖ್ಯ ಆಡಳಿತಾಧಿಕಾರಿ, ಕೇಂದ್ರ ಕಛೇರಿ, ವಿಶ್ವೇಶ್ವರಯ್ಯ ಜಲ ನಿಗಮ ಚಿತ್ರದುರ್ಗ ಎಂದು ಮರು ವಿನ್ಯಾಸಗೊಳಿಸಿ ಆದೇಶ ನೀಡಿರುತ್ತದೆ.(ಆದೇಶದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ). ಸದರಿ ಮುಖ್ಯ ಆಡಳಿತಾಧಿಕಾರಿ, ಚಿತ್ರದುರ್ಗ ಹುದ್ದೆಗೆ ಸೂಕ್ತ ಅಧಿಕಾರಿಯನ್ನು ಸ್ಥಳನಿಯುಕ್ತಿಗೊಳಿಸಲು ಸರ್ಕಾರವನ್ನು ಈಗಾಗಲೇ ಕೋರಲಾಗಿದ್ದು, ಇನ್ನು ನಿಯುಕ್ತಿಯಾಗಿರುವುದಿಲ್ಲ. ಆದರೆ, ದಿನಾಂಕ 01.01.2017 ರಿಂದ ಕೇಂದ್ರ ಕಛೇರಿಯು ಕಾರ್ಯಾರಂಭ ಮಾಡಿರುವುದರಿಂದ ವಿಶ್ವೇಶ್ವರಯ್ಯ ಜಲ ನಿಗಮದ ಕೇಂದ್ರ ಕಛೇರಿಯಲ್ಲಿ ಆಡಳಿತ ಮತ್ತು ಭೂಸ್ವಾಧೀನ ವಿಷಯಗಳನ್ನು ನಿರ್ವಹಿಸುವುದು ಅವಶ್ಯವಾಗಿರುತ್ತದೆ.

ಈ ಅಂಶಗಳ ಹಿನ್ನಲೆಯಲ್ಲಿ ಮತ್ತು ಸರ್ಕಾರದಿಂದ ಅಧಿಕಾರಿಯನ್ನು ನಿಯುಕ್ತಿಗೊಳಿಸುವವರೆಗೆ, ಆಡಳಿತಾತ್ಮಕ ದೃಷ್ಟಿಯಿಂದ ಮುಖ್ಯ ಆಡಳಿತಾಧಿಕಾರಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಕೇಂದ್ರ ಕಛೇರಿ ಚಿತ್ರದುರ್ಗ ಹುದ್ದೆಯ ಪ್ರಭಾರವನ್ನು ಸ್ವಯಂ ಆಗಿ ಮುಂದಿನ ಆದೇಶದವರೆಗೆ ವಹಿಸಿಕೊಳ್ಳಲು ಆದೇಶಿಸಿದೆ.

ವಂದನೆಗಳೊಂದಿಗೆ

**(ಆರ್. ರುದ್ರಯ್ಯ)**
**ವಿಶೇಷಾಧಿಕಾರಿಗಳು**
**ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ**

**ಪ್ರತಿಯನ್ನು** : 1. ಕಂಪನಿ ಕಾರ್ಯದರ್ಶಿಗಳು, ವಿಜೆಎನ್.ಎಲ್, ನೋಂದಾಯಿತ ಕಛೇರಿ, ಬೆಂಗಳೂರು.
2. ಅಧೀಕ್ಷಕ ಅಭಿಯಂತರರು, ವಿಜೆಎನ್.ಎಲ್, ನೋಂದಾಯಿತ ಕಛೇರಿ, ಬೆಂಗಳೂರು.

C/o : Karnataka Neeravari Nigam Limited, No.1, Coffeeboard Building, 4th Floor, Dr. B.R. Ambedkar Veedhi, B'lore - 1
Ph: 080-2283074-78 Fax: 080-2836015 Email : mail@vjnl.in Website : www.vjnl.in
CIN : U41000KA2016SGC097260